# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 19-12-2018

ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸುರಕ್ಷಿತ ಅರಣ್ಯ ಪ್ರದೇಶ ಹಾಗೂ ಶಾಸನ ಬದ್ಧ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; ಅವುಗಳಲ್ಲಿ ಪಹಣಿ ಪತ್ರಿಕೆಯಲ್ಲಿ ದಾಖಲಾದ ಮತ್ತು ಪಹಣಿ ಪತ್ರಿಕೆಯಲ್ಲಿ ದಾಖಲಾಗಲು ಬಾಕಿಯಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; ಇವುಗಳನ್ನು ಪಹಣಿ ಪತ್ರಿಕೆಯಲ್ಲಿ ದಾಖಲಾತಿ ಮಾಡಲು ಇರುವ ಕಾಲಮಿತಿ ಯಾವುದು; (ಜಿಲ್ಲಾವಾರು ಹೆಕ್ಟೇರ್‌ವಾರು ವಿವರ ನೀಡುವುದು) | ರಾಜ್ಯದಲ್ಲಿರುವ ರಕ್ಷಿತ ಅರಣ್ಯ ಮತ್ತು ಶಾಸನಬದ್ಧ ಅರಣ್ಯ ಭೂಮಿಗಳ ಒಟ್ಟು ವಿಸ್ತೀರ್ಣ 5,71,725.23 ಹೆಕ್ಟೇರ್ ಇರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1 ರಲ್ಲಿ ಒದಗಿಸಿದೆ.**<br><br>ಸದರಿ ಭೂಮಿಗಳನ್ನು ಪಹಣಿ ಪತ್ರಿಕೆಗಳಲ್ಲಿ ದಾಖಲು ಮಾಡಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಮತ್ತು ಸಭೆಗಳನ್ನು ಆಯೋಜಿಸಿ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ. ಇವುಗಳನ್ನು ಪಹಣಿ ಪತ್ರಿಕೆಯಲ್ಲಿ ದಾಖಲಾತಿ ಮಾಡಲು ಯಾವುದೇ ಕಾಲಮಿತಿ ವಿಧಿಸಿರುವುದಿಲ್ಲ. |
| ಆ) | ಪಹಣಿ ಪತ್ರಿಕೆಯಲ್ಲಿ ಅರಣ್ಯ ಭೂಮಿ ದಾಖಲಾಗದೇ ಇರುವುದರಿಂದ ಅಕ್ರಮ-ಸಕ್ರಮ ಭೂಮಂಜೂರಾತಿಯಲ್ಲಿ ರೈತರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು; | ಹೌದು.<br><br>ಅರಣ್ಯಜಮೀನನ್ನು ಆರ್.ಟಿ.ಸಿ. ಯಲ್ಲಿ ದಾಖಲಿಸಲು ಮೊದಲು ಆದ್ಯತೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಗ್ರಾಮ ಪಂಚಾಯತಿಗಳಿಂದ ಬೆಳೆಸಲಾದ ನೆಡು ತೋಪುಗಳನ್ನು ಅರಣ್ಯ ಇಲಾಖೆ ತನ್ನ ದಾಖಲೆಯಲ್ಲಿ ಅಳವಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಜಾಗವನ್ನು ಪುನಃ ಗ್ರಾಮ ಪಂಚಾಯತಿಗೆ ವರ್ಗಾಯಿಸಿದ ಪ್ರಕರಣಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | ಅರಣ್ಯೇತರ ಪ್ರದೇಶಗಳಲ್ಲಿ ಬೆಳೆಸಲಾದ ನೆಡುತೋಪುಗಳು ಸಾಮಾಜಿಕ ಅರಣ್ಯದ ಒಡಂಬಡಿಕೆಯೊಂದಿಗೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು ಗ್ರಾಮ ಪಂಚಾಯತಿಗಳಿಗೆ ಸರ್ಕಾರದ ಆದೇಶಗಳನ್ವಯ ಪಾಲಿಸಿದರೆ ಪಾಲು ತತ್ವದನ್ವಯ ಪಾಲನ್ನು ಮಾತ್ರ ಹಂಚಿಕೆ ಮಾಡಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಬೆಳೆಸಲಾದ ನೆಡುತೋಪುಗಳು ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮದಡಿ ಅರಣ್ಯ ಇಲಾಖೆಯು ಗ್ರಾಮ ಅರಣ್ಯ ಸಮಿತಿಗಳೊಡನೆ ಒಡಂಬಡಿಕೆ ಮಾಡಿಕೊಂಡು ಪಾಲಿಸಿದರೆ ಪಾಲು ತತ್ವದನ್ವಯ ಪಾಲನ್ನು ಮಾತ್ರ ಹಂಚಿಕೆ ಮಾಡಲಾಗುತ್ತದೆ. ಅರಣ್ಯ ಮತ್ತು ಅರಣ್ಯೇತರ ಸರ್ಕಾರದ ಪ್ರದೇಶಗಳಲ್ಲಿ ನೆಡುತೋಪು ಬೆಳೆಸಿದ ಪ್ರದೇಶಗಳನ್ನು ಗ್ರಾಮ ಪಂಚಾಯಿತಿಗೆ ವರ್ಗಾಯಿಸುವುದಿಲ್ಲ.<br><br>ಬೆಳಗಾವಿ, ಕಲಬುರಗಿ ಮತ್ತು ಬೆಂಗಳೂರು ವಿಭಾಗದ ಜಿಲ್ಲೆಗಳಲ್ಲಿ ಇಂತಹ ಯಾವುದೇ ಪ್ರಕರಣಗಳು ಕಂಡು ಬರುವುದಿಲ್ಲ. ಆದರೆ ಮೈಸೂರು ವಿಭಾಗದ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ 3 ಗ್ರಾಮ ಪಂಚಾಯತ್‌ಗಳಲ್ಲಿ ಒಟ್ಟು 7 ಪ್ರಕರಣಗಳು ಗ್ರಾಮ ಪಂಚಾಯತ್‌ಗಳಿಂದ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬೆಳೆಸಲಾದ ನೆಡು ತೋಪುಗಳನ್ನು ಅರಣ್ಯ ಇಲಾಖೆ ತನ್ನ ದಾಖಲೆಯಲ್ಲಿ ಅಳವಡಿಸಿಕೊಂಡಿದೆ. ಈ ನೆಡುತೋಪುಗಳಲ್ಲಿ 5 ಪ್ರಕರಣಗಳನ್ನು ಪುನಃ ಗ್ರಾಮ ಪಂಚಾಯತ್‌ಗೆ ವರ್ಗಾಯಿಸಲಾಗಿದೆ. |

ಸಂಖ್ಯೆ: ಅಪಜೀ 175 ಎಫ್‌ಎಎಫ್ 2018

(ಆರ್.ಶಂಕರ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಅನುಬಂಧ–1

| ಕ್ರ. ಸಂ | ಜಿಲ್ಲೆ | ಸಂರಕ್ಷಿತ ಅರಣ್ಯ ಪ್ರದೇಶ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಶಾಸನಬದ್ಧ ಅರಣ್ಯ ಪ್ರದೇಶದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಬೆಂಗಳೂರು (ನ) | 274.00 | 0.00 |
| 2 | ಬೆಂಗಳೂರು (ಗ್ರಾ) | 8786.00 | 0.00 |
| 3 | ರಾಮನಗರ | | 0.00 |
| 4 | ಬೆಳಗಾವಿ | 1203.00 | 0.00 |
| 5 | ಬಳ್ಳಾರಿ | 32554.00 | 0.00 |
| 6 | ಬೀದರ್ | 12491.00 | 0.00 |
| 7 | ಬಿಜಾಪುರ | 29.00 | 0.00 |
| 8 | ಬಾಗಲಕೋಟೆ | 0.00 | 0.00 |
| 9 | ಚಿಕ್ಕಮಗಳೂರು | 35238.00 | 894.90 |
| 10 | ಚಿತ್ರದುರ್ಗ | 7466.00 | 0.00 |
| 11 | ದಾವಣಗೆರೆ | 2125.00 | 0.00 |
| 12 | ದಕ್ಷಿಣ ಕನ್ನಡ | 15.00 | 12962.47 |
| 13 | ಉಡುಪಿ | 1687.00 | 22985.06 |
| 14 | ಧಾರವಾಡ | 320.00 | 0.00 |
| 15 | ಗದಗ್ | 356.00 | 0.00 |
| 16 | ಹಾವೇರಿ | 988.00 | 0.00 |
| 17 | ಗುಲ್ಬರ್ಗ | 22669.00 | 0.00 |
| 18 | ಯಾದಗಿರಿ | | 0.00 |
| 19 | ಹಾಸನ | 8845.00 | 0.00 |
| 20 | ಕೊಡಗು | 10545.00 | 104373.57 |
| 21 | ಕೋಲಾರ | 8763.00 | 0.00 |
| 22 | ಚಿಕ್ಕಬಳ್ಳಾಪುರ | | 0.00 |
| 23 | ಮಂಡ್ಯ | 2267.00 | 0.00 |
| 24 | ಮೈಸೂರು | 2331 | 0.00 |

| | | | |
|---|---|---|---|
| 25 | ಚಾಮರಾಜನಗರ | 7110.000 | 0.00 |
| 26 | ರಾಯಚೂರು | 4175.00 | 0.00 |
| 27 | ಕೊಪ್ಪಳ | 5554 | 0.00 |
| 28 | ಶಿವಮೊಗ್ಗ | 110969 | 26053.43 |
| 29 | ತುಮಕೂರು | 13034 | 0.00 |
| 30 | ಉತ್ತರ ಕನ್ನಡ | 54213 | 50448.80 |
| | ಒಟ್ಟು | **354007.00** | **217718.23** |

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಭೂ ದಾಖಲೆ)